## 3. ನವಿಲು

- ಸಂಪಾದಿತ

**ಅಭ್ಯಾಸ**

**1. ಪದಗಳ ಅರ್ಥ**:

ಅಲೆ = ತರೆ, ಕತ್ತು = ಕೊರಳು, ಕೊಂಕು = ಡೊಂಕು, ಛಾಯೆ = ನೆರಳು, ತುರಾಯಿ = ಹಕ್ಕಿಗಳ ಜುಟ್ಟು ನಯನ ನಯನ = ಕಣ್ಣು; ಅಕ್ಕಿ ನೇತ್ರ ಆವಾಸ = ನೆಲೆ; ಮನೆ, ಮನೆ, ಕಮಾನು = ಅರ್ಧಚಂದ್ರಾಕೃತಿಯ ರಚನೆ, * ಚಮಕಿಸು = ಹೊಳಪು, ಜಿನುಗು = ತೊಟ್ಟಿಕ್ಕು ನರ್ತನ = ನರ್ತನ = ಕುಣಿತ, ಬಾಧೆ = ತೊಂದರೆ' ನೋವು; ಅಡ್ಡಿ, ಅಡ್ರಿ ಮನೋಹರ = ಸುಂದರ, ಮುರುಳಿ = ಕೊಳಲು, ಕೊಳಲು, ರಾಷ್ಟ್ರಪಕ್ಷಿ = ರಾಷ್ಟ್ರಗೆ ವ್ಯವಕ್ಕೆ ಪಾತ್ರವಾದ ಪಾ ತ್ರವಾದ ಪಕ್ಷಿ ವರ್ಣ = ಬಣ್ಣ ಹಿಂಡು = ಗುಂಪು, ಗುಂಪು, ಮುರುಳಿ ಮೋಹನ = ಕೃಷ್ಣ ಮೋಹನ = ಆಕರ್ಷಣೆ; ಸೆಳೆತ, ಲಾವಣ್ಯ = ಸೊಗಸು; ಒಯಾರ, ಶಿಖಿ ಶಿಖಿ = ನವಿಲಿನ ತಲೆ ಮೇಲಿನ ಜುಟ್ಟು ಸಹಸ್ರಾಕ್ಷ = ಸಾವಿರ ಕಣ್ಣು, ಹುಲ್ಲು ಗಾವಲು = ಹುಲ್ಲಿನ ಮೈದಾನ. ಮೈದಾನ,

**I ಪ್ರಶ್ನೆಗಳು :**

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ** ;

1. ನವಿಲಿನ ಕಣ್ಣುಗಳು ಹೇಗೆ ಹೊಳೆಯುತ್ತವೆ ?

ಉತ್ತರ: ನವಿಲಿನ ಕಣ್ಣುಗಳು ಫಳಫಳ ಹೊಳೆಯು ತ್ತವೆ.

2. ನವಿಲು ಯಾವ ರೀತಿ ಕುಣಿಯುತ್ತದೆ ?

ಉತ್ತರ: ನವಿಲು ಥಕಥೈ ಎಂದು ಕುಣಿಯು ತ್ತದೆ.

3. ನವಿಲಿಗೆ ಇರುವ ಇತರ ಹೆಸರುಗಳಾವುವು ?

ಉತ್ತರ: ನವಿಲಿಗೆ ಇರುವ ಇತರ ಹೆಸರುಗಳೆಂದರೇ ಮಯೂರ, ಸಹಸ್ರಾಕ್ಷ, ಶಿಖಿ.

4. ನವಿಲಿಗೆ ಭಾರತದಲ್ಲಿ ಯಾವ ಗೌರವ ಲಭಿಸಿದೆ ?

ಉತ್ತರ: ನವಿಲಿಗೆ ಭಾರತದಲ್ಲಿ ರಾಷ್ಟ್ರ ಪಕ್ಷಿ " ಗೌರವ ಲಭಿಸಿದೆ.

5. ನವಿಲುಗರಿ ಯಾರ ಜುಟ್ಟಿನ ಅಲಂಕಾರವಾಗಿ ಬಳಕೆಯಾಗಿದೆ ?

ಉತ್ತರ: ನವಿಲುಗರಿ ಮುರಳಿ ಮೋಹನನ ಜುಟ್ಟಿಗೆ ಅಲಂಕಾರವಾಗಿ ಬಳಕೆಯಾಗಿದೆ.

8. ನೀಲಿ ಬಣ್ಣದ ನವಿಲುಗಳು ಯಾವ ದೇಶಗಳಲ್ಲಿ ಕಂಡುಬರುತ್ತವೆ?

ಉತ್ತರ: ನೀಲಿ ಬಣ್ಣದ ನವಿಲುಗಳು ಭಾರತ ಮತ್ತು ಶ್ರೀಲಂಕಾ ದೇಶದಲ್ಲಿ ಕಂಡುಬರುತ್ತದೆ.

**ಆ) ಕೆಳಗಿನ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯದಲ್ಲಿ ಮೂರು ಉತ್ತರಿಸಿರಿ.**

1. ನವಿಲು ಕುಣಿಯುವ ರೀತಿಯನ್ನು ವರ್ಣಿಸಿ.

ಉತ್ತರ: ನವಿಲು ತನ್ನ ಕತ್ತನ್ನು ಅತ್ತ ಇತ್ತ ತಿರುಗಿಸುತ್ತ ಥಕಥೈ ಎಂದು ಹೆಜ್ಜೆ ಹಾಕುತ್ತಾ ತನ್ನ ಗರಿಯನ್ನು ಬಿಚ್ಚಿ ಕುಣಿಯು ತ್ತದೆ.

2. ನವಿಲಿನ ಗರಿಯ ವಿಶೇಷತೆಗಳೇನು ?

ಉತ್ತರ: ನವಿಲಿನ ಗರಿಯು ಉದ್ದವಾಗಿದ್ದು ಅದು ಬಣ್ಣ ಬಣ್ಣದ ಬೀಸಣಿಕೆಯಂತೆ ಕಾಣು ತ್ತದೆ. ಅದು ಗರಿ ಬಿಚ್ಚಿದಾಗ ಅದರಲ್ಲಿ ಸಾವಿರಾರು ಕಣ್ಣುಗಳು ಫಳಫಳ ಫಳಫಳ ಹೊಳೆಯುತ್ತದೆ.ಅದರ ಸುತ್ತ ತಾಮ್ರಮಿಶ್ರಿತ ಬಂಗಾರ ವರ್ಣದ ಉಂಗುರ ಚಮಕಿಸು ತ್ತದೆ.

4. ನವಿಲನ್ನು ಸಹಸ್ರಾಕ್ಷ ಎಂದು ಏಕೆ ಕರೆಯುವರು ?

ಉತ್ತರ: ನವಿಲು ಗರಿ ಬಿಚ್ಚಿದಾಗ ಆ ಗರಿಯಲ್ಲಿ ಸಾವಿರಾರು ಕಣ್ಣುಗಳು ಗೋಚರಿಸುತ್ತದೆ. ಅದರಿಂದ ನವಿಲನ್ನು ನವಿಲನ್ನು ಸಹಸ್ರಾಕ್ಷ (ಸಾವಿರ ಕಣ್ಣು) ಎಂದು ಕರೆಯುವರು

5. ಗಂಡು ನವಿಲಿನ ವಿಶೇಷತೆ ಏನು ?

ಉತ್ತರ: ಹೆಣ್ಣು ನವಿಲಿಗೆ ಇರದ ಸೌಂದರ್ಯ ಗಂಡು ನವಿಲಿಗೆ ಇರುವುದು ವಿಶೇಷತೆಯಾಗಿದೆ. ಗಂಡು ನವಿಲು ತುರಾಯಿ ಹೊಂದಿರುತ್ತದೆ. ಗರಿಗಳು ಉದ್ದವಾಗಿದ್ದು, ಸಾವಿರಾರು ಕಣ್ಣುಗಳನ್ನು ಒಳಗೊಂಡಿರುತ್ತದೆ ನೋಡುಗರ ಮನಸೂರೆಗೊಳ್ಳುವಂತೆ ಕತ್ತನ್ನು ತಿರುಗಿಸಿ, ಥಕಥೈ ಎಂದು ನೃತ್ಯ ಮಾಡುತ್ತದೆ. ಇದರ ರೂಪಲಾವಣ್ಯಕ್ಕೆ ಕವಿಗಳು ಮನಸೋತಿದ್ದಾರೆ. ಹಾಗೂ ನಮ್ಮ ರಾಷ್ಟ್ರಪಕ್ಷಿ' ಎಂಬ ಬಿರುದಿಗೆ ಪಾತ್ರವಾಗಿದೆ.

6. ನವಿಲನ್ನು ರೈತಮಿತ್ರ ಎಂದು ಏಕೆ ಕರೆಯುತ್ತಾರೆ ?

ಉತ್ತರ : ರೈತರ ಬೆಳೆದ ಬೆಳೆಗಳಿಗೆ ಕೀಟಬಾಧೆ ತಗುಲದಂತೆ ಬೆಳೆಗಳ ರಕ್ಷಣೆಯನ್ನು ಮಾಡುತ್ತದೆ.ಕೀಟಗಳನ್ನು ತಿನ್ನುತ್ತದೆ. ಹಾಗೂ ನವಿಲು ವಾಸಿಸುವ ಸ್ಥಳಗಳಲ್ಲಿ ಹಾವುಗಳು ಸುಳಿಯಲಾರವು.ಆದ್ದರಿಂದ ನವಿಲನ್ನು ರೈತಮಿತ್ರ ಎಂದು ಕರೆಯುತ್ತಾರೆ.

**ಈ) ಬಿಟ್ಟ ಸ್ಥಳಗಳನ್ನು ನೀಡಿರುವ ನಾಲ್ಕು ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ**

1. ಷಣ್ಮುಖನ ವಾಹನ (**ಕ) ನವಿಲು**

2. ನವಿಲು ನೋಡಲು ಎಷ್ಟು ಸಂದರವೋ ಅಷ್ಟೇ (**ಅ) ಶಿಸ್ತಿನ ಸಿಪಾಯಿ**

3. ನವಿಲು ಇರುವ ಪ್ರದೇಶದಲ್ಲಿ ಇವು ಸುಳಿಯಲಾರವು. **ಕ) ಹಾವುಗಳು**

4. ನವಿಲಿಗೆ ಹಸಿರು ಛಾಯೆ ಈ ದೇಶದಲ್ಲಿ ಇರುತ್ತದೆ. **(ಕ) ಜಾವಾ ಮತ್ತು ಮಯನ್ಮಾರ್**

**III. ಭಾಷಾಭ್ಯಾಸ : -**

ಅ) ಈ ಪದಗಳನ್ನು ಸ್ವಂತ ವಾಕ್ಯಗಳಲ್ಲಿ ಬರೆಯಿರಿ.

1. ಹಚ್ಚ ಹಸಿರು : ನಮ್ಮ ಮನೆಯ ಮೈದಾನ ಹಚ್ಚಹಸಿರಿನಿಂದ ಕೂಡಿದೆ.

2. ಅಪರಾಧ - ಅಪರಾಧ ಮಾಡುದರಿಂದ ಸಮಾಜದ ಸ್ವಾಸ್ಥ್ಯ ಹಾಳಾಗುತ್ತದೆ.

3. ಸುಂದರ : ಕೃಷ್ಣನ ಕೊಳಲು ಸುಂದರವಾಗಿದೆ.

4. ಸಂಕೇತ: ಹಸಿರು ಸಮೃದ್ಧಿಯ ಸಂಕೇತ

5. ಮನಸೋಲು – ನವಿಲು ನೋಡಿ ಎಲ್ಲರ ಮನಸೋಲುತ್ತದೆ.

6) ಶಿಸ್ತಿನ ಸಿಪಾಯಿ – ನವಿಲು ಶಿಸ್ತಿನ ಸಿಪಾಯಿ ಎಂದು ಕರೆಯುವರು.

**ಆ) ಸಮಾನಾರ್ಥಕ ಪದಗಳನ್ನು ಬರೆಯಿರಿ.**

1. ನಯನ = ಕಣ್ಣು, ನೇತ್ರ
2. ನವಿಲು = ಸಹಸ್ರಾಕ್ಷ, ಮಯೂರ,ಶಿಖಿ,
3. ಲಾವಣ್ಯ - ಸುಂದರ, ಮನೋಹರ
4. ರೆಕ್ಕೆ = ಗರಿ, ಪುಕ್ಕ
5. ಬಂಗಾರ – ಚಿನ್ನ, ಕನಕ, ಸ್ವರ್ಣ,

**ಇ) ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.**

1. ಹಿಂಸೆ × ಅಹಿಂಸೆ
2. ಆರಂಭ × ಅಂತ್ಯ
3. ಹೊಗಳು × ತೆಗಳು
4. ಶಿಸ್ತು x ಅಶಿಸ್ತು